ಓ ಎಸ್ ನಂಃ 388/2014

ಪಿ. ಡಬ್ಲ್ಯೂ ಃ 1

ದಿಃ 8.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ 25 ನೇ ಪ್ರತಿವಾದಿ ಪರ ಶ್ರೀ ಎನ್ ಎಸ್ ಎಸ್ ವಕೀಲರಿಂದ

ನಮ್ಮ ತಂದೆ ಯಾವಾಗ ತೀರಿಕೊಂಡಿದ್ದಾರೆ ಎಂದು ಗೊತ್ತಿಲ್ಲ. 7 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ನನ್ನ ಅಣ್ಣ ದೇವರಾಜು ನಮ್ಮ ಜೊತೆಯಲ್ಲಿಯೇ ವಾಸವಾಗಿರುತ್ತಾರೆ. ದಾವಾ ಹಾಕುವ ಸಮಯದಲ್ಲಿ ನಾನು ಮತ್ತು ನಮ್ಮ ಅಣ್ಣ ಲಾಯರ್ ಆಫೀಸ್ ಗೆ ಹೋಗಿದ್ದೇವು. ನಮ್ಮ ತಂದೆ ಯಾವ ಪರಿಹಾರಕ್ಕಾಗಿ ದಾವೆ ಮಾಡಿದ್ದಾರೆ ಮತ್ತು ಏನು ದಾಖಲೆಗಳನ್ನು ಕೊಟ್ಟಿದ್ದಾರೆ ಎಂದು ನನಗೆ ಗೊತ್ತು. 25 ನೇ ಪ್ರತಿವಾದಿಯ ತಂದೆ ನನಗೆ ಗೊತ್ತು. ಅವರ ತಂದೆ ಹನುಮಯ್ಯ ಎಂದರೆ ಸರಿ. ವೆಂಕಟಸ್ವಾಮಿ ಇವರು ಯಾವಾಗ ತೀರಿಕೊಂಡಿದ್ದರು ಎಂದು ಹೇಳಲಾಗುವುದಿಲ್ಲ. ಅದೇ ರೀತಿ ನಂಜಮ್ಮ ಯಾವಾಗ ತೀರಿಕೊಂಡರು ಎಂದು ಹೇಳಲಾಗುವುದಿಲ್ಲ.

ಮಹಿಮಕ್ಕನಿಗೆ ಹನುಮಯ್ಯನಿಂದ 6 ಜನ ಮಕ್ಕಳಿರುತ್ತಾರೆ ಎಂದರೆ ಸರಿ. ಅವರೆಂದರೆ ರಾಮರಸಯ್ಯ, ಆಂಜನಪ್ಪ, ಮರಿಚನ್ನಯ್ಯ, ಲೆಂಕಪ್ಪ, ನಂಜಮ್ಮ ಮತ್ತು ಗಂಗಮ್ಮ ಇರುತ್ತಾರೆ. ಹನುಮಯ್ಯನ 2ನೆ ಹೆಂಡತಿಯ ಕಡೆಯ ಮಗ ನಮ್ಮ ತಾತ ಲೆಂಕಪ್ಪ ಎಂದರೆ ಸರಿ. ನಂಜಮ್ಮ ಮತ್ತು ಗಂಗಮ್ಮ ಅವರು ಬದುಕಿದ್ದಾರೆ, ಅವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ. ನಮ್ಮ ದೊಡ್ಡಪ್ಪಂದಿರು ತೀರಿಕೊಂಡಿದ್ದಾರೆ. ನಮ್ಮ ದೊಡ್ಡಪ್ಪಂದಿರು, ಲೆಂಕಪ್ಪ, ಹನುಮಯ್ಯ ಮತ್ತು ಮಹಿಮಕ್ಕ ಇವರು ಯಾವಾಗ ತೀರಿಕೊಂಡಿದ್ದಾರೆ ಎಂದು ನಮ್ಮ ತಂದೆ ವಾದಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ನಮ್ಮ ತಂದೆ ರಾಮನಗರ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ 408/2011 ಎನ್ನುವ ದಾವೆ ಮಾಡಿದ್ದರು, ಅದು ಈ ನ್ಯಾಯಾಲಯ ಆದ ನಂತರ ಓ ಎಸ್ 388/2014 ಎಂದು ಆಗಿದೆ ಎಂದರೆ ಸರಿ.

ನಮ್ಮ ತಂದೆ ಈ ದಾವೆಯನ್ನು 10 ಐಟಂ ಸ್ವತ್ತುಗಳಲ್ಲಿ ಭಾಗ ಬರಬೇಕೆಂದು ಹಾಕಿದ್ದಾರೆ. ಅದನ್ನು ಹನುಮಯ್ಯನ 2ನೆ ಹೆಂಡತಿ ಮಹಿಮಕ್ಕನ 3 ಜನ ಗಂಡು ಮಕ್ಕಳ ವಿರುದ್ದ ದಾವೆ

ಮಾಡಿದ್ದಾರೆ. ನಮ್ಮ ತಂದೆ ದಾವೆ ಹಾಕಿದಾಗ ಜಿನ್ನಪ್ಪ ರವರು ಅವರ ಸಹೋದರರ ವಿರುದ್ದ ದಾವೆ ಮಾಡಿರಲಿಲ್ಲ ಎಂದರೆ ಸರಿ. ನಾವು ಪ್ರತಿವಾದಿ 1 ರಿಂದ 18 ರವರ ವಿರುದ್ದ ಮಾತ್ರ ದಾವೆ ಮಾಡಿದ್ದೇವು ಎಂದರೆ ಸರಿ. ವೆಂಕಟಸ್ವಾಮಿ ಮತ್ತು ಅವರ ವಾರಸುದಾರರ ಸ್ವತ್ತಿನ ಬಗ್ಗೆ ದಾವೆ ಮಾಡಿರಲಿಲ್ಲ ಎಂದರೆ ಸರಿ. ಜಿನ್ನಪ್ಪ ಹಾಗೂ ಅವರ ಸಹೋದರರ ವಿರುದ್ದ ನಾನು ಅಥವಾ ನಮ್ಮ ತಂದೆ ಯಾವುದೆ ಪರಿಹಾರ ಕೇಳಿಲ್ಲ ಎಂದರೆ ಸರಿ. ಈ ದಾವೆಯಲ್ಲಿ 25 ನೇ ಪ್ರತಿವಾದಿಯು ಅರ್ಜಿ ಸಲ್ಲಿಸಿ ಪ್ರತಿವಾದಿಯಾಗಿ ಸೇರ್ಪಡೆಯಾಗಿದ್ದಾರೆ ಎಂದರೆ ಸರಿ. 25 ನೇ ಪ್ರತಿವಾದಿ ಸಲ್ಲಿಸಿದ್ದ ಲಿಖಿತ ಹೇಳಿಕೆಯನ್ನು ನಾನು ಓದಿಸಿ ತಿಳಿದುಕೊಂಡಿಲ್ಲ.

25 ನೇ ಪ್ರತಿವಾದಿಯು ಮಾಗಡಿ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ 231/1996 ಎನ್ನುವ ದಾವೆ ಮಾಡಿದ್ದರು ಮತ್ತು ಅದು ವಜಾ ಆಗಿದೆ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ 11 ನೆ ಪುಟದಲ್ಲಿ ಬರೆಯಿಸಿದ್ದೇನೆ ಎಂದರೆ ಸರಿ. ಅದು ವಜಾ ಆಗಿ 25 ನೆ ಪ್ರತಿವಾದಿಯು ಈ ನ್ಯಾಯಾಲಯದಲ್ಲಿ ಆರ್ ಎ 65/2019 ಎನ್ನುವ ಅಪೀಲು ಮಾಡಿದ್ದರು ಮತ್ತು 33 ನೆ ಪ್ರತಿವಾದಿಯು ಆರ್ ಎ 66/2019 ಎಂಬ ಅಪೀಲನ್ನು ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಹಾಕಿದ್ದಾರೆ ಎಂದು ಬರೆಯಿಸಿದ್ದೇನೆ ಎಂದರೆ ಸರಿ. ಆ ಎರಡು ಆಪೀಲುಗಳಲ್ಲಿ ಪ್ರತಿವಾದಿ 25 ಮತ್ತು ಪ್ರತಿವಾದಿ 33 ರವರು ನಮ್ಮ ತಂದೆ ತೀರಿಕೊಂಡ ನಂತರ ನಮ್ಮನ್ನು ವಾರಸುದಾರರಾಗಿ ಪಾರ್ಟಿ ಮಾಡಿದ್ದಾರೆ ಎಂದರೆ ಸರಿ. ಆ ಎರಡು ಆಪೀಲುಗಳಲ್ಲಿ ನಾನು ಹಾಜರಾಗಿ ನಮ್ಮ ಪರವಾಗಿ ವಕೀಲರನ್ನು ಇಟ್ಟುಕೊಂಡಿದ್ದೇವೆ ಎಂದರೆ ಸರಿ. ಆ ಎರಡು ಆಪೀಲುಗಳು ಇತ್ಯರ್ಥವಾಗದೆ ಚಾಲ್ತಿಯಲ್ಲಿವೆ ಎಂದರೆ ಸರಿ.

ಓ ಎಸ್ 231/1996 ನಮ್ಮ ತಂದೆ 22 ನೇ ಪ್ರತಿವಾದಿಯಾಗಿ ಪ್ರತಿವಾದ ಪತ್ರ ಸಲ್ಲಿಸಿದ್ದರು ಎಂದರೆ ಸರಿ. ನಮ್ಮ ದೊಡ್ಡಪ್ಪ ಮರಿಚನ್ನಯ್ಯ ಅವರನ್ನು ಕರೆದುಕೊಂಡು ಹೋಗಿ ಅವರಿಗೆ ಗೊತ್ತಿಲ್ಲದಂತೆ ಹಾಕಿಸಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಆ ರೀತಿ ಸಹಿ ಮಾಡಿಸಿಕೊಂಡಿರುವುದು ನಮ್ಮ ತಂದೆಯ ಗಮನಕ್ಕೆ ಇತ್ತು. ಮರಿಚನ್ನಯ್ಯ ಮತ್ತು

ನಮ್ಮ ತಂದೆ ಪರಸ್ಪರ ಒಪ್ಪಿಗೆಯಿಂದ ಪ್ರತಿವಾದಪತ್ರ ಹಾಕಿದ್ದಾರೆ ಎಂದರೆ ಸರಿ. ಆದರೆ ನಮ್ಮ ತಂದೆ ನನಗೆ ಗೊತ್ತಿಲ್ಲದಂತೆ ಹಾಕಿ ಬಂದಿದ್ದೇನೆ ಎಂದು ಹೇಳಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಈ ದಾವೆಯ ವಾದಪತ್ರದಲ್ಲಿ ಓ ಎಸ್ 231/1996 ವಜಾ ಆಗಿದೆ, ಎರಡು ಆಪೀಲುಗಳು ಪೇಡಿಂಗ್ ಇದೆ ಎಂದು ಮಾತ್ರ ಬರೆಯಿಸಿದ್ದೇನೆ ಎಂದರೆ ಸರಿ. ಈ ದಾವೆಯಲ್ಲಿರುವ ಷೆಡ್ಯೂಲ್ ಗಳು ಓ ಎಸ್ 231/1996 ರ ದಾವೆಯ ಷೆಡ್ಯೂಲ್ ಗಳಲ್ಲಿ ಇದ್ದವು ಎಂದರೆ ಇರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಓ ಎಸ್ 231/1996 ರಲ್ಲಿ ವಾದಿಯ ಪರವಾಗಿ 1928 ರ ಕ್ರಯಪತ್ರ ಮತ್ತು 1945 ರ

ವ್ಯವಸ್ಥಾ ಪತ್ರ ಇವುಗಳು ನಿಶಾನೆಗೊಳಿಸಿದ್ದು ಅವುಗಳನ್ನು ನಾನು ತೆಗೆದುಕೂಂಡಿಲ್ಲ. ಅದಲ್ಲದೆ ಆ ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಗಳ ಪರ ಸಲ್ಲಿಸಿದ್ದ ದಾಖಲೆಗಳ ದೃಢೀಕೃತ ಪ್ರತಿಗಳನ್ನು ನಾನು ಪಡೆದುಕೊಂಡಿಲ್ಲ. ಓ ಎಸ್ 231/1996 ರಲ್ಲಿ ನಮ್ಮ ತಂದೆ ಯಾವ ಕಾರಣಕ್ಕೆ ಸಾಕ್ಷಿ ಹೇಳಿಲ್ಲ ಎಂದು ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ದಿನಾಂಕ ಃ 15.08.1967 ರಂದು ಹನುಮಯ್ಯ ಇವರು ವಿಲ್ ಬರೆದಿದ್ದಾರೆ ಎಂದು ಬರೆಯಿಸಿದ್ದೇನೆ ಎಂದರೆ ಸರಿ. ಹನುಮಯ್ಯ ಇವರು ತನ್ನ ಚಿಕ್ಕ ಹೆಂಡತಿಯ ಗಂಡು ಮಕ್ಕಳಿಗೆ ಆ ವಿಲ್ ನ್ನು ಬರೆಯಿಸಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ದಿನಾಂಕಃ 15.08.1967 ರ ವಿಲ್ ನ್ನು ನಾವು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಓ ಎಸ್ 231/1996 ರಲ್ಲಿ ಆ ವಿಲ್ ನ್ನು ಹಾಜರುಪಡಿಸಿ ಅದರ ಬಗ್ಗೆ ವಿಚಾರಣಾ ನ್ಯಾಯಾಲಯ ಈಗಾಗಲೇ ತೀರ್ಪು ಕೊಟ್ಟಿದೆ ಎಂದರೆ ಸರಿ. ಆ ತೀರ್ಪನ್ನು ಪ್ರಶ್ನಿಸಿ 25 ನೆ ಪ್ರತಿವಾದಿಯು ಆರ್ ಎ 65/2019 ಎಂಬ ಅಪೀಲು ಮಾಡಿದ್ದಾರೆ ಎಂದರೆ ಸರಿ. ಓ ಎಸ್ 231/1996 ರ ವಾದಪತ್ರದ ದೃಡೀಕೃತ ಪ್ರತಿಯನ್ನು ಪಡೆದಿದ್ದೇನೆ. ಅದನ್ನು ನಮ್ಮ ಲಾಯರ್ ಬಳಿ ಕೊಟ್ಟಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಆ ದಾವೆಯಲ್ಲಿ ಎ ಷೆಡ್ಯೂಲ್ ಸ್ವತ್ತುಗಳು ಜಿನ್ನಪ್ಪ ಹಾಗೂ ಅವರ ತಾಯಿ ಹಾಗೂ ಅವರ ಸಹೋದರ ಸಹೋದರಿಯರಿಗೆ ಸೇರಬೇಕೆಂದು ದಾವೆ ಮಾಡಿದ್ದರು ಎಂದರೆ ಸರಿಯಲ್ಲ. ಅದು ಅವರಿಗೆ ಸಂಬಂದ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಅದನ್ನು ನಮ್ಮ ತಂದೆ ತಕರಾರು ಮಾಡಿಲ್ಲ ಎಂದರೆ ಸರಿ.

ಬಿ ಷೆಡ್ಯೂಲ್ ಸ್ವತ್ತಿನಲ್ಲಿ ನಮಗೆ ಭಾಗ ಬರಬೇಕೆಂದು 25 ನೇ ಪ್ರತಿವಾದಿ ಅವರ ತಾಯಿ, ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯರು, ನಮ್ಮ ತಂದೆ ಹಾಗೂ

ದೊಡ್ಡಪ್ಪಂದಿರ ವಿರುದ್ದ ಹಾಕಿದ್ದರು ಎಂದರೆ ಸರಿ. ಅದರ ಬಗ್ಗೆಯೂ ವಿಚಾರಣಾ ನ್ಯಾಯಾಲಯದಲ್ಲಿ ತೀರ್ಪು ಆಗಿ ಆಪೀಲು ಪೇಡಿಂಗ್ ಇದೆ ಎಂದರೆ ಸರಿ. ಆ ದಾವೆ ಚಾಲ್ತಿಯಲ್ಲಿದ್ದಾಗ ನಮ್ಮ ತಂದೆ ಅನಾವಶ್ಯಕವಾಗಿ ಈ ದಾವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿದ್ದ ದಾವಾ ಷೆಡ್ಯೂಲ್ ಸ್ವತ್ತುಗಳ ವಿಸ್ತೀರ್ಣ ಮತ್ತು ಚೆಕ್ ಬಂದಿ, ಈ ದಾವೆಯಲ್ಲಿ ಆ ದಾವೆಯಲ್ಲಿ ಇದ್ದ ಯಾವ ಸ್ವತ್ತುಗಳು ಇತ್ತು ಮತ್ತು ಇಲ್ಲ ಎಂದು ನಾವು ಹೇಳಿಲ್ಲ ಎಂದರೆ ಸರಿಯಲ್ಲ. ಓ ಎಸ್ 231/1996 ರಲ್ಲಿ ನಾವು ನಮ್ಮ ಪರವಾಗಿ ನಮ್ಮ ಅಣ್ಣ ಮತ್ತು ನಾವು ಸಾಕ್ಷಿ ಹೇಳಬಹುದಾಗಿತ್ತು ಎಂದರೆ ಸರಿ. ಆದರೆ ನಮಗೆ ತಿಳುವಳಿಕೆ ಇರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಈಗ ನನಗೆ ಲಾಯರ್ ಇಟ್ಟುಕೊಂಡಿದ್ದರಿಂದ ಕಾನೂನಿನ ತಿಳುವಳಿಕೆ ಅಲ್ಪ ಸ್ವಲ್ಪ ಇದೆ ಎಂದು ಸಾಕ್ಷಿ ಹೇಳುತ್ತಾರೆ. ಆ ವಿಲ್ ನ್ನು ಈ ದಾವೆಯಲ್ಲಿ ಹಾಜರುಪಡಿಸಿ ಅದನ್ನು ನಾವು ರುಜುವಾತುಪಡಿಸುತ್ತೇವೆ. ಆ

ದಾವೆಯಲ್ಲಿ ಮೂಲ ವಿಲ್ ಪ್ರತಿ ನಿ ಡಿ 43 ಎಂದು ನಿಶಾನೆಯಾಗಿದೆ ಎಂದರೆ ಸರಿ. ಅದರ ಪ್ರತಿಯನ್ನು ಪಡೆಯದೆ ಮುಖ್ಯ ವಿಚಾರಣಾ ಪ್ರಮಾಣಪತ್ರ ಹಾಕಿದ್ದೇನೆ ಎಂದರೆ ಸರಿ. ಈ ದಾವೆಯಲ್ಲಿ 25 ನೆ ಪ್ರತಿವಾದಿ ಹಾಜರಾಗಿ ಅವರ ತಾಯಿ, ಅಣ್ಣ ತಮ್ಮ ಮತ್ತು ಅಕ್ಕ ತಂಗಿಯರು ಈ ದಾವೆಯಲ್ಲಿ ಅವಶ್ಯಕ ಪಾರ್ಟಿಗಳು ಎಂದು ಹೇಳಿದ ನಂತರ ಪ್ರತಿವಾದಿ 26 ರಿಂದ 32 ರವರೆಗೆ ಅವರ ವಿರುದ್ದ ದಾವೆ ಮಾಡಿದ್ದೇವೆ ಎಂದರೆ ಸರಿ. ಅವರ ವಿರುದ್ದವೂ ಪರಿಹಾರ ಕೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಓ ಎಸಿ 231/1996 ರಲ್ಲಿ ಈ ದಾವೆಯಲ್ಲಿ ಇರುವ ಎಲ್ಲ ಅಂಶಗಳು ಇದ್ದವು ಎಂದರೆ ಸರಿಯಲ್ಲ. ನಾವು ನನ್ನ ದೊಡ್ಡಪ್ಪಂದಿರ ಜೊತೆಗೆ ಸೇರಿಕೊಂಡು ದಾವಾ ಸ್ವತ್ತುಗಳನ್ನು ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ಈ ದಾವೆಯನ್ನು ಹಾಕುವ ಉದ್ದೇಶವಿಲ್ಲದಿದ್ದರೂ ಸಹ ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 33 ರವರ ಪ್ರತಿವಾದಿ ಪರ ಶ್ರೀ ಟಿ ಕೆ ಹೆಚ್ ವಕೀಲರಿಂದ :**

33 ನೆ ಪ್ರತಿವಾದಿ ನನಗೆ ಗೊತ್ತಿಲ್ಲ. ಚಿಕ್ಕರಸಯ್ಯ ಇವರು ಹನುಮಯ್ಯ ಇವರ ತಮ್ಮನ ಮಗ ಎಂದರೆ ಸರಿ. ಅವರನ್ನು ನಾವು ಈ ದಾವೆಯಲ್ಲಿ ಪಾಟಿ ಮಾಡಿರಲಿಲ್ಲ ಎಂದರೆ ಸರಿ. ಅವರೇ ಅರ್ಜಿ ಹಾಕಿಕೊಂಡು ಪ್ರತಿವಾದಿಯಾಗಿ ಸೇರ್ಪಡೆ ಯಾಗಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಅವರು ಪ್ರತ್ಯೇಕವಾಗಿ ಅರ್ಜಿ ಹಾಕಿಕೊಂಡು ಸೇರ್ಪಡೆಯಾಗಿದ್ದಾರೆ ಎಂದರೆ ಸರಿ. ನಮ್ಮ ತಂದೆ ದಾವಾ ಸ್ವತ್ತುಗಳಲ್ಲಿ ಭಾಗ ಬರಬೇಕೆಂದು ದಾವೆ ಮಾಡಿದ್ದಾರೆ ಎಂದರೆ ಸರಿ. ಹನುಮಯ್ಯ ಇವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಮ್ಮ ತಾತನ ತಂದೆಗೆ ಇದ್ದ ಎಲ್ಲ ಆಸ್ತಿಗಳು ಈ ದಾವೆಯಲ್ಲಿ ಸೇರಿತ್ತು ಎಂದರೆ ಸರಿಯಲ್ಲ. ಕೆಲವು ಆಸ್ತಿಗಳನ್ನು ಬಿಟ್ಟಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿ ಪುನಃ ಹೇಳುತ್ತಾರೆ ನಮ್ಮ ತಾತನ ಸ್ವಂತ ಆಸ್ತಿಗಳನ್ನು ಮಾತ್ರ ಸೇರಿಸಿದ್ದೇವೆ. ಪಿತ್ರಾರ್ಜಿತ ಸ್ವತ್ತುಗಳನ್ನು ಸೇರಿಸಿಲ್ಲ. 33 ನೇ ಪ್ರತಿವಾದಿಯು ವೆಂಕಟಪ್ಪ ಇವರ ವಾರಸುದಾರರು ಎಂದರೆ ಸರಿಯಲ್ಲ. ಅವರಿಗೂ ಸಹ ಈ ದಾವೆಯಲಿಲ ಭಾಗದ ಹಕ್ಕಿದೆ ಎಂದರೆ ಸರಿಯಲ್ಲ. ಲೆಂಕಪ್ಪನ ಅಣ್ಣ ತಮ್ಮಂದಿರು ಎಷ್ಟು ಜನ ಇದ್ದರು ಎಂದು ನನಗೆ ಗೊತ್ತಿಲ್ಲ. 33 ನೆ ಪ್ರತಿವಾದಿಗೆ ದಾವಾ ಸ್ವತ್ತುಗಳಲ್ಲಿ ಭಾಗ ಹೋಗಿದೆ ಎಂದು ಯಾವುದೆ ದಾಖಲೆ ಕೊಟ್ಟಿಲ್ಲ ಆದರೆ ಅವರಿಗೆ ಬಹಳ ಹಿಂದೆಯೇ ಭಾಗ ಹೋಗಿದೆ ಎಂದು ಸಾಕ್ಷಿ ಹೇಳುತ್ತಾರೆ. ಯಾವಾಗ ಭಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ಲೆಂಕಪ್ಪನ ಮಕ್ಕಳ ಮದ್ಯೆ ಭಾಗವಾಗಿರಲಿಲ್ಲ ಎಂದರೆ ಸರಿಯಲ್ಲ. ಅದೇ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. 33 ನೇ ಪ್ರತಿವಾದಿಗೆ ಭಾಗ ಕೊಟ್ಟ ಬಗ್ಗೆ ಯಾವುದೆ ದಾಖಲೆಯನ್ನು ನೋಡಿಲ್ಲ. ಅವರು ಸಹ ಈಗ ಒಟ್ಟು ಕುಟುಂಬದಲ್ಲಿ ಮುಂದುವರೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.